ಹೆಂಗ್ ಹೇಳನ ಇದ್ರಾಗ್ ನನ್ ಹೇಡ್ತಿ ಬೆತ್ತಲೆ ಚಿತ್ರ ಅದಾವೆ ಅಂತ! ಹಟ್ಟಿ ಬಾಗ್ಲಾಗೆ ಯಾವನರ ನೋಡಿದ್ರೆ ಬಾಳಿ ಬದ್ಕಿದ್ ಮನೆ–ಮಂತ್ಯಾನ ಸಂಡ್ ಎತ್ಕಂಡ್ ಊರಾಗ್ ಓಡಾಡಕ್ಕಾಗ್ತದಾ? ಏನ್ ಮಾಡನಪ್ಪ ಸಿವನೇ ಅಂದ್ಕಂಡ್ ಅಂಗ್ಡಿ ಮೆಟ್ಟಿಲಿಳಿದು ಸೈಕಲ್ ತಿರುವಿ ಅಯ್ಯಂಗಾರ್ ಬೇಕರೀಲಿ ಒಂದ್ ಬನ್ ತಗಂಡ್ ಅರ್ಧ ಚಾ ಕುಡುದು ಹತ್ ರುಪಾಯಿ ನೋಟು ಚಾಕಲೇಟ್ ಬಾಟಲಿ ಮುಚ್ಚಳದ ಮೇಲಿಕ್ಕಿ ಮತ್ತೆ ಚಿನ್ನಾಪುರದ ಕಡೆ ಹೊಂಟ! ಎಂತಾ ಸಂಕ್ಟ ಬಂತಿದು... ಏಟು ದಿನದ ಯವಾರನೋ ಏನೋ ಥೂ... ಇಂತಾದ್ದು ಕಣ್ಣಿಗ್ ಬೀಳ ಮುಂದೆ ಸೂಳೆಕೆರೆಲಿ ಮುಳುಗಬಾರದಿತ್ತೇ ಅನ್ನಿಸಿಬಿಡ್ತು ಕೆಂಚೀರಪ್ಪನಿಗೆ. ಎದೆ ತುಂಬಾ ಹಸಿರ್ ಹುಲ್ಲಂಗ್ ಹೆಂಡ್ತೀನ ಇಟ್ಕಂಡ್ ಪ್ರೀತಿಸ್ತಿದ್ನಲ್ಲಾ... ಬೀಳೊ ಮಳೆ ಗಲೀಜಾಗಬೌದು ನನ್ನ ಎದೆ ಹೊಳ್ಯಾಗ್ ಎಳನೀರಂಗ್ ಇಟ್ಕಂಡ್ ಇರೋ ಇವಳ್ನ, ಇವಳ ಪ್ರೀತಿನ ಹೊಲಸಂತ ಹೆಂಗ್ ಅನ್ಕಳ್ಳಿ? ನಿಕ್ಕರ್ ಜೇಬಿನ ಒಳಗ್ ಕುಂತ ಮೊಬೈಲು ಉರಿ ಉರಿ ಕೆಂಡದಂತಾಗಿ ತೊಡೆಗುಂಟ ಸುಟ್ಟಂತಾಗಿ ಇಡೀ ಮೈ ಕಿಡಿ ಮುಟ್ಟಿದ ಬಣವೆ ಆದಂಗಾಗಿತ್ತು!

ಆರನೇ ಕ್ಲಾಸಿಗೇ ಸಾಮಲಾಪುರದ ಶಾಲೆಗೆ ನಡೆದು ಹೋಗಲಾರದೆ ಸಾಕ್ಕಾಡಿದ ಕೆಂಚೀರಪ್ಪ.